(ಇಂದು ದಿನಾಂಕಃ 31-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ ಶ್ರೀ. ಕೆ.ಆರ್ಃ</u>**

1. ನಾನು 1 ರಿಂದ 10 ನೇ ತರಗತಿಯವರೆಗು ನಿಡಗುಂದಾ ಗ್ರಾಮದಲ್ಲಿ ಶಾಲೆ ಕಲಿತಿರುತ್ತೇನೆ. ನನ್ನ ತಂಗಿ 10 ನೇ ತರಗತಿಯವರೆಗು ಶಾಲೆ ಕಲಿತಿರುತ್ತಾಳೆ. ನನ್ನ ತಂಗಿ ಹಲಕೊಡ ಗ್ರಾಮದಲ್ಲಿ ಮತ್ತು ನಿಡಗುಂದಾ ಗ್ರಾಮದಲ್ಲಿ ಶಾಲೆ ಕಲಿತಿರುತ್ತಾಳೆ. ನಾನು ಮತ್ತು ನನ್ನ ತಂಗಿ ಶಾಲೆ ಕಲಿತಿರುತ್ತಿವಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಂಗಿಯ ಶಾಲಾ ದಾಖಲಾತಿಗಳಲ್ಲಿ ಸಂಪೂರ್ಣ ಮಾಹಿತಿ ಬರೆದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಂಗಿಯ ಶಾಲಾ ದಾಖಲಾತಿಗಳಲ್ಲಿ ನಿ.ಪಿ-4 ರಿಂದ ನಿ.ಪಿ-9 ರವರೆಗೆ ದಾಖಲಾತಿಗಳಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

2. ನಾಗಪ್ಪ ತಂದೆ ಕತಲಪ್ಪ ಚಿತ್ಕೊಡ ಇವರು ನನ್ನ ತಾಯಿಯ ತಂಗಿಯ ಗಂಡ ಇರುತ್ತಾರೆ. ಅವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಈಗ ಅವರು ನಿವೃತ್ತರಾಗಿರುತ್ತಾರೆ. ನಾಗಪ್ಪ ತಂದೆ ಕತಲಪ್ಪ ಚಿತ್ಕೊಡ ರವರ ಸಹಾಯ ಪಡೆದು ನಾವು ಸುಳ್ಳು ಶಾಲಾ ದಾಖಲಾತಿಗಳನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮತ್ತು ನಮಗೆ ಯಾವುದೇ ಸಂಬಂದ ಇಲ್ಲ ಎಂದರೆ ಸಾಕ್ಷಿ ಸಂಬಂದ ಇದೆ ಎಂದು ಹೇಳುತ್ತಾರೆ. ಪ್ರತಿವಾದಿ 1 ರಿಂದ 5 ರವರು ನನ್ನ ಮಲತಾಯಿ ಮಕ್ಕಳು ಎಂದು ಸುಳ್ಳು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 5 ರವರು ನನ್ನ ತಂದೆ ಯಾವುದೇ ರೀತಿಯಿಂದ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸಾಯಪ್ಪನಿಗೆ ಒಬ್ಬಳೆ ಹೆಂಡತಿ ನಿಂಗಮ್ಮ ಎಂದರೆ ಸಾಕ್ಷಿ ನನ್ನ ತಾಯಿ ನರಸಮ್ಮ ಸಾಯಪ್ಪನ ಹೆಂಡತಿ ಎಂದು ಹೇಳುತ್ತಾರೆ. ನನ್ನ ತಾಯಿ ನರಸಮ್ಮ ಸಾಯಪ್ಪನ ಹೆಂಡತಿ ಮತ್ತು ಅವರು ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಾವು ಮತ್ತು ನನ್ನ ತಾಯಿ ಸಾಯಪ್ಪನ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನಾವು ಮತ್ತು ಪ್ರತಿವಾದಿಯರು ಜಂಟಿ ಕುಟುಂಬದಲ್ಲಿದ್ದು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ನನ್ನ ತಾಯಿ ಹೆಣ್ಣುಮಕ್ಕಳಾಗಿದ್ದರಿಂದ ದಾವಾ ಆಸ್ತಿಗಳನ್ನು ಪ್ರತಿವಾದಿಯರು ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ಬರುವ ಆದಾಯದಲ್ಲಿ ನಮಗೆ ತೋರಿಸುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೂ ನನಗೂ ಯಾವುದೇ ಸಂಬಂದ ಇಲ್ಲ, ಆದ್ದರಿಂದ ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ಬರುವ ಆದಾಯವನ್ನು ನಮಗೆ ತೋರಿಸುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಮೊದಲು ನಮ್ಮನ್ನು ನೋಡಿಕೊಳ್ಳುತ್ತಿದ್ದರು ಆ ನಂತರ ಅಮರ ನಮ್ಮನ್ನು ನೋಡಿಕೊಳ್ಳದೆ ಇರುವುದರಿಂದ ನಾವು ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ದಾವಾ ಆಸ್ತಿಗಳ ಮಾಲಿಕರು ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಕಲಬುರ್ಗಿ ನ್ಯಾಯಾಲಯದಲ್ಲಿ ನುಡಿದಿರುವ ಸಾಕ್ಷಿಗೆ ವಿರುದ್ದವಾಗಿ ನಾನು ಶಾಲಾ ದಾಖಲಾತಿಗಳನ್ನು ತಯಾರಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.